ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷ್ (ದಂಡು).

ಇದೇ ವಾರಕ್ಕೆ ಹಿಂದಿನ ೫ ವರ್ಷಗಳ ಅಂದಾಜು.

ಆಹಾರ ಜಿನಸಿಗಳ ಧಾರಣೆಗಳು :— ಚಾಲ್ತಿ.

ಅಕ್ಕಿ ರೂಪಾಯಿ 1ಕ್ಕೆ	8	6 ರಿಂದ	6½ ವರಿಗೆ	ಸೇರುಗಳು
ರಾಗಿ ,, ...	20	12 ರಿಂದ	12½ ವರಿಗೆ	ಸೇರುಗಳು

ವ್ಯವಸಾಯ ಕೆಲಸ—ರಾಗಿಯ ಕುಯ್ಯಲು.

ರಾಗಿಯ ಬೆಲೆಯು ಬಹು ಜಡಾವಿನಲ್ಲಿದೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಏನೂ ಇಲ್ಲ.

ನಿಂತಿರುವ ಪೈರುಗಳ ಸ್ಥಿತಿ.—ಕಳೆದ ವಾರದಲ್ಲಿ ಆದ ಮಳೆಯಿಂದ, ಹೊಸಕೋಟೆ, ಕಾರ್ಕಾರಹಳ್ಳಿ, ದೇವನಹಳ್ಳಿ, ಈ ತಾಲ್ಲೂಕುಗಳಲ್ಲಿ ನಿಂತಿರುವ ಪೈರುಗಳು ಸಾಧಾರಣವಾಗಿ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ. ಆದರೆ, ಪುಣಜೀ ಗೂ ಮತ್ತು ಇತರ ಕುಷ್ಕೀ ಪೈರುಗಳಿಗೂ ಮಳೆಯು ಹೆಚ್ಚಾಗಿ ಅತ್ಯಾವಶ್ಯಕವಾಗಿ ಬೇಕಾಗಿದೆ. ಸಕಾಲದಲ್ಲಿ ಮಳೆಯು ಬಾರದ್ದರಿಂದ ಅನೇಕ ತಾಲ್ಲೂಕುಗಳಲ್ಲಿ ಪುಣಜಿ ಭತ್ತವು ಸ್ವಲ್ಪ ಹೆಚ್ಚು ಕಡಮೆಯಾಗಿ ಬಾಡಿಹೋಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಬೆಂಗಳೂರು, ನೆಲಮಂಗಲ, ಕಾರ್ಕಾರಹಳ್ಳಿ, ಮಾಗಡಿ, ಕ್ಲೋಸ್‌ಪೇಟೆ, ಆನೇಕಲ್ಲು, ದೇವನಹಳ್ಳಿ, ಚನ್ನಪಟ್ಟಣ, ಈ ತಾಲ್ಲೂಕುಗಳಲ್ಲಿ ರಾಗಿಯು ಕುಯ್ಯಲು ಆಗುತ್ತಿದೆ. ಪೈರುಗಳಿಗೆ ಯಾವ ವಿಧವಾದ ನಷ್ಟವೂ ಆಗಿಲ್ಲವೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸಿಯು ಸಾಕಾದಷ್ಟು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಕಸಬಾ ಕ್ಲೋಸ್‌ಪೇಟೆ, ಕಾರ್ಕಾರಹಳ್ಳಿ, ಚನ್ನಪಟ್ಟಣಗಳಲ್ಲಿಯೂ ಮತ್ತು ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ, ಆನೇಕಲ್ಲು, ಈ ತಾಲ್ಲೂಕುಗಳ ಸರಹದ್ದಿನಲ್ಲಿರುವ ಕೆಲವು ಗ್ರಾಮಗಳಲ್ಲಿಯೂ, ಪ್ಲೇಗ್ ಇದೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯ—ಕೋಲಾರದಲ್ಲಿಯೂ ಮತ್ತು ಗುಡಿಬಂಡೆಯಲ್ಲಿಯೂ ವೈಶಾಖಿ ಭತ್ತ ಬಿತ್ತುವದಕ್ಕಾಗಿ ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ಮುಳಬಾಗಲಿನಲ್ಲಿ ಹುಚ್ಚೆಳ್ಳು.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಗುಡಿಬಂಡೆಯಲ್ಲಿ	ರಾಗಿ ಉತ್ಪತ್ತಿ	...	4 ಆಣೆ.
ಬಾಗೇಪಲ್ಲಿಯಲ್ಲಿ ...	ಡಿಟೋ	...	4 ರಿಂದ 8 ಆಣೆ ವರಿಗೆ.
ಚಿಕ್ಕಬಳ್ಳಾಪುರದಲ್ಲಿ ...	ಡಿಟೋ	...	8 ಆಣೆ.
ಶಿಡ್ಲಘಟ್ಟದಲ್ಲಿ ...	ಡಿಟೋ	...	6 ,,
ಚಿಂತಾಮಣಿಯಲ್ಲಿ	ಡಿಟೋ	...	6 ,,
ಚಿಕ್ಕಬಳ್ಳಾಪುರದಲ್ಲಿ ...	ಸಾಮೆ ಉತ್ಪತ್ತಿ	...	8 ,,
ಬಾಗೇಪಲ್ಲಿಯಲ್ಲಿ ...	ಡಿಟೋ	...	8 ,,
ಶ್ರೀನಿವಾಸಪುರದಲ್ಲಿ ...	ಡಿಟೋ	...	4 ರಿಂದ 8 ಆಣೆ ವರಿಗೆ.
ಗುಡಿಬಂಡೆಯಲ್ಲಿ	ಡಿಟೋ	...	4 ಆಣೆ.

ಚಿಕ್ಕಬಳ್ಳಾಪುರದಲ್ಲಿಯೂ ಮತ್ತು ಚಿಂತಾಮಣಿಯಲ್ಲಿಯೂ ಭತ್ತ ಉತ್ಪತ್ತಿ 2 ಆಣೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಕೋಲಾರದ ಚೆನ್ನೇದ ಘಟ್ಟಿಯಲ್ಲಿಯೂ ಮತ್ತು ಬಾರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕಸಬಾ ಕೋಲಾರದಲ್ಲಿಯೂ ಪ್ಲೇಗೂ ಮತ್ತು ಕಸಬಾ ಚಿಂತಾಮಣಿಯಲ್ಲಿಯೂ ಮತ್ತು ಅದಕ್ಕೆ ಸೇರಿದ ಕೆಲವು ಗ್ರಾಮಗಳಲ್ಲಿಯೂ ಸೀತಾಳೆ ಸಿಡುಬೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಶಿಡ್ಲಘಟ್ಟದ ತಾಲ್ಲೂಕಿನಲ್ಲಿ ಕೆಲವು ದನಗಳಿಗೆ "ಸಪ್ಪೇ ರೋಗವು" ಬಂದಿರುವದು ಹೊರ್ತು, ಮಿಕ್ಕ ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಸೊರಬ, ನಗರ, ಈ ತಾಲ್ಲೂಕುಗಳು ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ಇರುತ್ತಿದೆ. ಮತ್ತು, ಶಿವಮೊಗ್ಗ, ಹೊನ್ನಾಳಿ, ಈ ತಾಲ್ಲೂಕುಗಳ ಮತ್ತು ಕುಂಸಿ ಸಬ್ ತಾಲ್ಲೂಕಿನ, ಕೆಲವು ಭಾಗಗಳಲ್ಲಿ ಪ್ಲೇಗ್ ಇರುತ್ತಲಿದೆ.

12. ಶಿವಮೊಗ್ಗ, ಸೊರಬ, ಸಾಗರ, ನಗರ ಈ ತಾಲ್ಲೂಕುಗಳ ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಗೋಮಾರೀ ರೋಗವು ಇರುತ್ತಲಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಏನೂ ಇಲ್ಲ.

ನಿಂತಿರುವ ಪೈರುಗಳು—ಚಿಕ್ಕಮಗಳೂರಿನಲ್ಲಿ–ಭತ್ತ, ತೊಗರಿ, ಅವರೆ, ಹುರುಳಿ, ಕಾಫಿ ಮತ್ತು ಕಬ್ಬು; ಕಡೂರಿನಲ್ಲಿ ಹುರುಳಿ, ಅವರೆ, ಜೋಳ, ಮೆಣಸಿನಕಾಯಿ, ಮುಂತಾದವುಗಳು; ತರೀಕೆರೆಯಲ್ಲಿ–ಭತ್ತ, ರಾಗಿ, ಅವರೆ ಮತ್ತು ತೊಗರಿ; ಕೊಪ್ಪದಲ್ಲಿ–ಭತ್ತ, ಕಬ್ಬು, ಕಾಫಿ, ಮೆಣಸು ಮತ್ತು ಅಡಿಕೆ; ಮೂಡಿಗೆರೆಯಲ್ಲಿ–ಭತ್ತ, ರಾಗಿ, ಕಾಫಿ ಮತ್ತು ಅಡಿಕೆ; ಎಡೇಹಳ್ಳಿಯಲ್ಲಿ–ಭತ್ತ, ಕಾಫಿ ಮತ್ತು ಕಬ್ಬು; ಶೃಂಗೇರಿಯಲ್ಲಿ–ಭತ್ತ ಮತ್ತು ಅಡಿಕೆ; ಇವುಗಳೆಲ್ಲಾ ಬಳ್ಳೀ ಸ್ಥಿತಿಯಲ್ಲಿವೆ. ಆದರೆ, ಎಡೇಹಳ್ಳಿಯಲ್ಲಿ ಅಡಿಕೇ ಫಸಲಿಗೆ "ಕೊಳೀ ರೋಗವು" ಮತ್ತು ಕಡೂರಿನಲ್ಲಿ ಅರಳಿಗೆ "ಕೊಂಡ್ಲೀ ಹುಳುವು" ಹಿಡಿದು ಇದೆಯೆಂದೂ ರಿಪೋರ್ಟ್ಮಾಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿಕ ಮಗಳೂರಿನಲ್ಲಿ—ದೊಡ್ಡರಾಗಿ ಮತ್ತು ಕವಡೇ ಭತ್ತ, ಉತ್ಪತ್ತಿ 12 ಆಣೆ;

ಕಡೂರಿನಲ್ಲಿ—ಕಬ್ಬು ಮತ್ತು ರಾಗಿ, ಉತ್ಪತ್ತಿ 8 ಆಣೆ.

ತರೀಕೆರೆಯಲ್ಲಿ—ಭತ್ತ ಉತ್ಪತ್ತಿ 8 ಆಣೆ; ರಾಗಿ ಉತ್ಪತ್ತಿ 12 ಆಣೆ; ಮತ್ತು ಜೋಳ, ಉತ್ಪತ್ತಿ 16 ಆಣೆ.

ಕೊಪ್ಪದಲ್ಲಿ—ಅಡಿಕೆ ಉತ್ಪತ್ತಿ 4 ರಿಂದ 5 ಆಣೆ ವರಿಗೆ; ಮತ್ತು ಸ್ವಲ್ಪ ಯಾಲಕ್ಕಿ.

ಮೂಡಿಗೆರೆಯಲ್ಲಿ—ಕಾಫಿ ಮತ್ತು ರಾಗಿ, ಉತ್ಪತ್ತಿ 12 ಆಣೆ; ಮತ್ತು, ಯಾಲಕ್ಕಿ, ಉತ್ಪತ್ತಿ 4 ರಿಂದ 8 ಆಣೆ ವರಿಗೆ

ಎಡೇಹಳ್ಳಿಯಲ್ಲಿ—ಭತ್ತ ಮತ್ತು ಅಡಿಕೆ, ಉತ್ಪತ್ತಿ 12 ಆಣೆ.

ಶೃಂಗೇರಿಯಲ್ಲಿ—ಸ್ವಲ್ಪ ಅಡಿಕೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಕೊಪ್ಪ, ತರೀಕೆರೆ, ಕಡೂರು, ಈ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿದೆಯೆಂದು ರಿಪೋರ್ಟ್ಮಾಗಿದೆ. ಆಹಾರ ಜಿನಸು ಸಾಕು.

11. ಕಸಬಾ ಚಿಕ್ಕಮಗಳೂರಿನಲ್ಲಿ ಪ್ಲೇಗ್ ಕಮ್ಮಿಯಾಗಿ ಬರುತ್ತಿರುವದೂ ಮತ್ತು ಕಡೂರು, ಚಿಕ್ಕಮಗಳೂರು ಈ ತಾಲ್ಲೂಕುಗಳಲ್ಲಿ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಇರುವದು ಇವು ಹೊರತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಕೊಪ್ಪ, ತರೀಕೆರೆ, ಎಡೇಹಳ್ಳಿ ಇವುಗಳಲ್ಲಿ "ದೊಡ್ಡರೋಗವು" ಕಮ್ಮಿಯಾಗಿಬರುತ್ತಿದೆಯೆಂದು ರಿಪೋರ್ಟ್ಮಾಗಿದೆ. ಮತ್ತು ಅದು ಮೂಡಿಗೆರೆಯಲ್ಲಿ ಇನ್ನೂ ಇದೆಯೆಂದೂ, ಚಿಕ್ಕಮಗಳೂರಿನಲ್ಲಿ ಹರಡುತ್ತಿದೆಯೆಂದೂ ಮತ್ತು ಕುನ್ನೆಲ್ ಎಂಬ ಒಂದೇ ಗ್ರಾಮದಲ್ಲಿ 43 ದನಗಳು ಸತ್ತುಹೋದವೆಂದೂ, ರಿಪೋರ್ಟ್ಮಾಗಿದೆ. ಚಿಕ್ಕಮಗಳೂರು ಅಮಿಲರಿಂದ ಇದೇ ವಿಷಯದಲ್ಲಿ ಪ್ರತ್ಯೇಕ ರಿಪೋರ್ಟು ಮಾಡಬೇಕೆಂದು ಕೋರಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಬಿಳೀ ಜೋಳ, ಅರಳೆ, ಇಂಥವುಗಳು ಮಳೆಯು ಇಲ್ಲದ್ದರಿಂದ ಬಾಡಿ ಹೋಗುತ್ತಿವೆ.

ಬಿತ್ತನೆಯಾದ ಪೈರುಗಳು—ಏನೂ ಇಲ್ಲ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ದೇವನಗೆರೆ, ಜಗಲೂರು, ಈ ತಾಲ್ಲೂಕುಗಳಲ್ಲಿಯೂ ಮತ್ತು ಹರಿಹರದ ತಾಲ್ಲೂಕಿನಲ್ಲಿಯೂ ರಾಗಿ, ಜೋಳ ಮತ್ತು ನವಣೆ; ಉತ್ಪತ್ತಿ 4 ರಿಂದ 12 ಆಣೆ ವರಿಗೆ. ಚಿತ್ರದುರ್ಗ ಹಿರಿಯೂರು, ಜಗಲೂರು ಈ ತಾಲ್ಲೂಕುಗಳಲ್ಲಿ ಸಜ್ಜೆ; ಉತ್ಪತ್ತಿ 4ರಿಂದ 8 ಆಣೆ ವರಿಗೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಅರಳೆ, ಉತ್ಪತ್ತಿ 8 ಆಣೆ. ದೇವನಗೆರೆ ತಾಲ್ಲೂಕಿನಲ್ಲಿ ಭತ್ತ, ಉತ್ಪತ್ತಿ 8 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ನವಂಬರ್ 26ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಕಳೆದ ವಾರದಲ್ಲಿ ಮಳೆಯು ಆದಕಾರಣದಿಂದ ಸಾಧಾರಣವಾದ ಸ್ಥಿತಿಯಲ್ಲಿದೆ.

ಬಿತ್ತನೆಯಾದ ಪೈರುಗಳು—ಸೀರ್ಯ ಮತ್ತು ತಿಪಟೂರಿನಲ್ಲಿ ಕಡಲೆ. ಸೀರ್ಯದಲ್ಲಿ ಜೋಳ. ತಿಪಟೂರು ಮತ್ತು ತುರುವೇಕೆರೆ ಇವುಗಳಲ್ಲಿ ಧನಿಯಾ. ತಿಪಟೂರಿನಲ್ಲಿ ವೆಂಥ್ಯಾ.

ಕುಯ್ಯಲಾದ ಪೈರುಗಳು—ತುಮಕೂರು, ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಸೀರ್ಯ, ಗುಬ್ಬಿ, ಪಾವಗಡ, ಕೊರ್ಟಗೆರೆ, ತುರುವೇಕೆರೆ ಇವುಗಳಲ್ಲಿ ರಾಗಿ; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಸೀರ್ಯ, ಪಾವಗಡ, ಕೊರ್ಟಗೆರೆ, ಇವುಗಳಲ್ಲಿ ನವಣೆ; ಚಿಕ್ಕನಾಯಕನಹಳ್ಳಿ, ಗುಬ್ಬಿ, ಪಾವಗಡ, ಕೊರ್ಟಗೆರೆ, ಇವುಗಳಲ್ಲಿ ಸಾವೆ; ಚಿಕ್ಕನಾಯಕನಹಳ್ಳಿಯಲ್ಲಿ ಬರಗು; ಗುಬ್ಬಿಯಲ್ಲಿ ಹರಳು; ಪಾವಗಡದಲ್ಲಿ ಹಾರಕ; ಚಿಕ್ಕನಾಯಕನಹಳ್ಳಿಯಲ್ಲಿ ಜೋಳ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೀನಸು ಸಾಕು.

11. ಕಸಬಾ ತುಮಕೂರು, ಚಿಕ್ಕನಾಯಕನಹಳ್ಳಿ ಇವುಗಳಲ್ಲಿ ಪ್ಲೇಗ್ ಇರುತ್ತಲಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯ—ಏನೂ ಇಲ್ಲ.

ನಿಂತಿರುವ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಮೈಸೂರು, ಚಾಮರಾಜನಗರ, ನಂಜನಗೂಡು, ಶ್ರೀರಂಗಪಟ್ಣ, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವುಭಾಗಗಳಲ್ಲಿ ರಾಗಿ; ಶ್ರೀರಂಗಪಟ್ಣದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತ; ಮಳವಳ್ಳಿ, ಮಂಡ್ಯ. ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತ; ಮತ್ತು ಮೈಸೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹಲಸಂದಿ, ಉದ್ದು, ಹೆಸರು ಮತ್ತು ಮೆಣಸಿನಕಾಯಿ.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಹುಣಸೂರು, ನಂಜನಗೂಡು, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಮೈಸೂರು, ನಂಜನಗೂಡು, ಹುಣಸೂರು, ಗುಂಡ್ಲುಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಭತ್ತ, ಕಬ್ಬು, ಅವರೆ, ತೊಗರಿ, ಮೆಣಸಿನಕಾಯಿ, ರಾಗಿ, ಹುರುಳಿ, ಕಾಡು ಹುಚ್ಚೆಳ್ಳು, ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಅರಕೇಕೆರೆ ತಾಲ್ಲೂಕಿನಲ್ಲಿ ಮಳೇ ಇಲ್ಲದ್ದರಿಂದ ರಾಗೀ ಪೈರು ಬಹಳವಾಗಿ ನಷ್ಟಪಟ್ಟಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ಚನ್ನರಾಯಪಟ್ಣ ಮತ್ತು ಅರಕೇಕೆರೆ ಈ ತಾಲ್ಲೂಕುಗಳಲ್ಲಿ ಕಡಲೆಯನ್ನು ಬಿತ್ತುತ್ತಾ ಇದ್ದಾರೆ.

ಕುಯ್ಯಲಾದ ಪೈರು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಕಬ್ಬಿನ ಕಟಾವಾಗುತ್ತಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೀನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಣ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲಿಯೂ ಹುಲ್ಲೂ, ನೀರೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ತೊಗರಿ, ಅವರೆ, ಹುರುಳಿ, ಕಡಲೆ, ಕಬ್ಬು, ಅರಳಿ, ಹುಚ್ಚೆಳ್ಳು, ಮೆಣಸಿನಕಾಯಿ ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಚನ್ನಗಿರಿ, ಶಿವಮೊಗ್ಗ, ಹೊನ್ನಾಳಿ, ಸೊರಬ, ತೀರ್ಥಹಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತ, ರಾಗಿ, ಹೆಸರು, ಹುಚ್ಚೆಳ್ಳು, ನವಣೆ, ಜೋಳ, ಇವುಗಳ ಕುಯ್ಯಲಾಗುತ್ತಿವೆ. ಡಿಸ್ಟ್ರಿಕ್ಟಿನ ಮಲೆನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆಯ ಕಟಾವಾಗುತ್ತಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೀನಸು ಸಿಕ್ಕುತ್ತವೆ.